ಮಾಡಿಕೊಂಡು ಮಲಿಗಿದ್ಲು. ಶೇಕ್ರ ಈಗ ಅಲ್ಲಿರಲಿಲ್ಲ. ಸೀದಾ ಗುಡಿಕಡೆ ಓಡಿಬಂದ.

ಭರ್ತಿ ಹನ್ನಂದು ಘಂಟಿ. ಅಷ್ಟತ್ತಿಗೆ ಶಾಕಯ್ಯ ಬಂದವನೇ ಮನೆಬಾಗ್ಲು ದರಗ್ಗನ ತೆಗೆದ. ಒಳಗ ಶಾಕಯ್ಯನ ಅವ್ವ ಪಾರ್ಸಿ ಒಡದು ಮಂಚದಮೇಲೆ ಮಲಗಿದಾಕಿ ಹಂಗ ಉದ್ದಕ ಬಿದ್ದಿದ್ಲು. ಕೈಗೆ ನಿಲುಕುವಂಗ ನೀರಿನ ಡಬ್ಬಿ, ಬುತ್ತಿಡಬ್ಬಿ ಹಂಗ ಉಳಿದಿದ್ವು. ಏನೂ ಮುಟ್ಟಿರಲಿಲ್ಲ. ಶಾಕಯ್ಯ ಅವ್ವನ ಅವತಾರ ನೋಡಿ ಕಿಟಿಕ್ಯಾಗ ನಿಂತು ಹೊರ ನೋಡಿದ. ಶೇಕ್ರ ಆಗಲೇ ಗುಡಿಮುಂದ ಬಂದು ನಿಂತಿದ್ದು ನೋಡಿ ಕೈಮಾಡಿ ಕರೆದ. ಶೇಕ್ರ ದಡದಡ ಒಳಗ ಬಂದಮೇಲೆ ಶಾಕಯ್ಯ ತನ್ನ ಬ್ಯಾಗಲ್ಲಿ ತಂದಿದ್ದ ಬೀರುಬಾಟ್ಲಿ ತೋರಿಸಿ ಅವ್ವನ ಒಂದು ಕುಬುಸ, ಎರಡು ಬಾಂಡ್‌ಸೀರೆ ಅಲ್ಲಿದಾವು ನೋಡಂತ ಹೇಳಿ, ಮನಿ ಒಳಗನ ಬಚ್ಚಲದಾಗ ಸೀರೆ, ಕುಬುಸ ಒಗುಸಾಕ ಮುಂದಾದ.

ಅಷ್ಟತ್ತಿಗೆ ಶಾಕಯ್ಯ ಅವ್ವಗ ಒಂದೆರೆಡು ತುತ್ತು ತಿನಿಸಿ ಟೆರಾಸ್ ಏರಿ ಮೋಬೈಲ್ ಹಚ್ಚಿ ಐಪಿಲ್ನ ಲಾಸ್ಟ್‌ಓವರ್ ನೋಡುತ್ತಾ ಕೂತ. ಶೇಕ್ರಂದು ಒಂದು ಬೀರುಬಾಟ್ಲಿ ಶಾಕಯ್ಯನ ಬಗಲಗನೇ ತಣ್ಣಗ ಇದ್ದಿದ್ದು ನಾರ್ಮಲ್ ಆಗತೊಡಗಿತ್ತು. ಶೇಕ್ರ ಬಡಬಡ ಸೀರೆ, ಕುಬುಸ ಒಗದು, ಮಂಚದ ಬುಡಕ ಹೇತಿದ್ದ ಡಬ್ಬಿನ ತಿಪ್ಪಿಗೆ ಚೆಲ್ಲಿ, ಶಾಕಯ್ಯನ ಜತೆ ಬೀರುಬಾಟ್ಲಿ ಕುಡುಕಂತ ಏನೋ ಗೆದ್ದವನಂಗ ಮುಂದಾದ. 'ಲೇ ಶೇಕಿ... ಬೆಂಗಳೂರಾಗ ಗಂಡಹೆಣ್ತಿ ಆರಾಮು ಇದ್ರಿ... ಒಮ್ಮಿದೊಮ್ಮೆಲೆ ಇಲ್ಲಿಗೆ ನಿಮ್ಮಪ್ಪ ಯಾಕ ಕರಿಸ್ಯಾನ ಅಂಬೋದು ಇನ್ನಾದ್ರು ಗೊತ್ತಾತಿಲ್ಲ... ಹುಚ್ಚುಮುಂಡ್ಯೋನೆ' ಅಂತ ಶಾಕಯ್ಯ ಒಂಥರಾ ನೋಡಿ, ಮುಸುಮುಸು ನಗತೊಡಗಿದ. ಶಾಕಯ್ಯ ಒಳಗೊಳಗ ನಕ್ಕಿದ್ದು ಗೊತ್ತಾಗದೆ, 'ಏನ್ ದ್ವೇಷನೋ ಗೊತ್ತಿಲ್ಲ... ನಮಪ್ಪ ನಾವು ಮನಿಗೆ ಬಂದಾಗಿನಿಂದ ಮನ್ಯಾಗ ನಮ್ದು ಏನು ನಡೆದಂಗ ಮಾಡಿಬಿಟ್ಟಾನ... ಮನೇನು ಕಟ್ಟವಲ್ಲ... ಮನಿಮುಂದ ಬಚ್ಚಲನು ಕಟ್ಟವಲ್ಲ... ನನ್ ಹೆಣ್ತಿಜತೆ ಎಲ್ಲಾ ಕೆಲ್ಸ ಊರುಗೌಡ ಮಾಡಿಸಿಕೊಂಡಂಗ ಮಾಡಿಸಿಕೊಳ್ತಾನ... ಹರೇದ ಗಂಡಹೆಣ್ತಿ ಬಗ್ಗೆ ಒಂದೀಟನ ಯೋಚನೆ ಮಾಡವಲ್ಲ... ಪುಸುಪುಸು ಮಂದಿ ಮಾಡಿದಂಗ ಮದ್ವಿ ಮಾಡಿಬಿಟ್ಟ... ನಮ್ಗ ಇನ್ನೂ ಏನಂಥ ತಲಿ ಮಾಸಿಲ್ಲ... ಅದ್ಕ ನೀ ಹೇಳಿ ಕೊಟ್ಟಂಗ ಬೆಂಗಳೂರಾಗ ಕೆಲ್ಸ ಹುಡುಕಿಕೊಂಡು ಹೆಂಗೋ ಇದ್ವಿ... ಈಗ ಒಮ್ಮಿದೊಮ್ಮೆಲೆ ನಮ್ಮನ್ನ ಕರಿಸಿಕೊಂಡು ಕೂತಾನ... ಯಾಕಂತ ಗೊತ್ತಿಲ್ಲ... ನಾ ಇಲ್ಲಿ ಹೆಣ್ತಿನ ಮನ್ಯಾಗ ಬಿಟ್ಟು, ಕೆಲ್ಸಇಲ್ದೆ ಅಲ್ಲಿಲ್ಲಿ ತಿರುಗಿ ಮನಿಗೆ ಹೋದ್ರ ಅಪ್ಪನಂಬೋನು ಹೇಳ್ವ, ಕೇಳ್ವ ತಿಕ್ಕನಾಯಿ ಆದಂಗ ಆಗ್ತಾನ... ಮನ್ಯಾಗ ಅಷ್ಟುರೊಕ್ಕ ಇದ್ರು ಸ್ವಲ್ಪ ಖರ್ಚಿಗೆ ದುಡ್ಡು ಕೊಡಲ್ಲ... ಹೊಲ್ದಾಗ ಕೆಲ್ಸ ಮಾಡುಮಾಡಂತ ಮಿಂಡಗಾರ್ತಿನ ದಬ್ಬಿದಂಗ ದಬ್ಬುತಾನ... ಅಲ್ಲಿ ಬದ್ನಿಕಾಯಿ ಹರಿಯೋ ಕೆಲ್ಸ ಇಲ್ಲ. ಎಲ್ಲಾ ಕೂಲ್ಯಾಳಿಲೆ, ಟಾಕ್ರಿಲೇ ರೊಕ್ಕ ಕೊಡದೆ ಉದ್ರಿ ಮಾಡಿಸಿರ್ತಾನ... ಟಾಕ್ರಿವು ದಿನ ಯೇಷಗರ್ರು ತಿರಿಗಿದಂಗ ರೊಕ್ಕಕ ತಿರಗ್ತಾವು... ಬೆಳೆಬಂದು ರೊಕ್ಕ ಕೈಗೆ ಬಂದ್ರೂ ಮಗಸೊಸಿ, ಮನೆಮಾರಂತ ಯೋಚನನೇ ಮಾಡಲ್ಲ... ಅದೇ ತಗಡಿನ ಹಳೆಮನೆ, ಅದೇ ಹತ್ತಿ ಕಟಿಗೆ ಬಚ್ಚಲದಾಗ ಸೀರೆ ಸುತ್ತಿಕೊಂಡು ಜೀವ್ನ ಮಾಡ್ರು ಅನ್ನೋ ಲೆಕ್ಕಾಚಾರದಾಗ ಇದಾನ.. ಅದಕ ನಾನು ಹೆಣ್ತಿನ ಮನ್ಯಾಗ ಬಿಟ್ಟು, ನೆಲೆ ಕಾಣಲಾರದ ಊರಾಗ ನಾಕು ರೂಪಾಯಿ ಸಲುವಾಗಿ ಕಂಡವರು ಹೇಳಿದಂಗ ಕಂಡಕೆಲ್ಸ ಮಾಡಿಕೋತ, ನನ್‌ಬ್ಯಾನಿ ಹಗುರ ಮಾಡಿಕೊಳ್ಳಾಕ ಕಂಡವರು ಕುಡಿಸಿದ್ರ ಕುಡುಕಂತ, ಕಂಡವರು ತಿನಿಸಿದ್ರ ತಿನಕಂತ, ಕಂಡಕಂಡವರ ಜತಿ ತಿರುಗಾಕ ಮುಂದಾಗಿನಿ.. ಇಷ್ಟೆಲ್ಲಮಾಡಿ ಮನಿಗೆಹೋಗಿ ಒಂತಾಸು ಹೆಣ್ತಿಜತೆ ಇರಲಾರದಂಗ, ಕೂಡಲಾರದಂಗ ಆಗೈತಿ ನನ್ ಬಾಳೇವು... ನಮ್ಮಪ್ಪನೇ ಮನ್ಯಾಗ ಇರತಾನ... ಒಟ್ಟ ಹೊರಗ ಹೋಗಲ್ಲ... ಅದು ಯಾವಾಗೋ ಏನೋ...' ಅಂತ ಶೇಕ್ರ ಕುಡಿದ ನಿಶ್ಯಾಗ ಕಣ್ಣೀರು ಹಾಕುತ್ತಲೇ ಎಲ್ಲಾ ಹೇಳಿ ಶಾಕಯ್ಯನ ಬಗಲನೆ ಜೋಲಿಬಂದು ಉಳ್ಳಿದ.

ಶಾಕಯ್ಯ ಇದನ್ನೆಲ್ಲಾ ಕುಡಿದ ನಿಶ್ಯಾಗ ಕಣ್ಣು